<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ:287/2025</u>**

**ಸಾಕ್ಷಿಯನ್ನು ದಿಃ 18.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಕಿರಣ್ ಕುಮಾರ್ | ಸಿಡಬ್ಲ್ಯೂ6 | ಪಿಡಬ್ಲ್ಯೂ5 |
| ತಂದೆಯ ಹೆಸರು | ವೆಂಕಟೇಶ್ | | |
| ವಯಸ್ಸು | 26 ವರ್ಷ | | |
| ಉದ್ಯೋಗ | ಎಲೆಕ್ಟ್ರೀಶಿಯನ್ | | |
| ವಾಸಸ್ಥಳ | ಮನುಗನಹಳ್ಳಿ, ಬಿಳಿಕೆರೆ. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಿಪಿ. 14 ರಲ್ಲಿರುವ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 14(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕಳೆದ ಜನವರಿ 20 ನೆ ತಾರೀಖಿನಂದು ರಂದು ಮಾಡಿದ್ದೆ. ಚಾಸಾ 5 ರವರಿಗೆ ಆರೋಪಿ ಫೋನ್ ಮಡಿದ್ದು, ಅದರಂತೆ ಬಿಳಿಕೆರೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಅಪಘಾತದ ವಿಚಾರವಾಗಿ ಮಾತನಾಡಿಕೊಳ್ಳುತ್ತಿದ್ದು, ಸಹಿ ಮಾಡಲು ಹೇಳಿದಾಗ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ಸಹಿ ಮಾಡಿದಾಗ ಬೆಳಿಗ್ಗೆ 10 ರಿಂದ 11 ಗಂಟೆ ಆಗಿತ್ತು. ಆ ಸಮಯದಲ್ಲಿ ನಾನು, ಚಾಸಾ 5 ಮತ್ತು ಆರೋಪಿ ಠಾಣೆಯಲ್ಲಿ ಇದ್ದೇವು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಮ್ಮ

ಸಮಕ್ಷಮ ಯಾವುದೆ ವಾಹನಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿಲ್ಲ, ಆದರೆ ಠಾಣೆಯ ಆವರಣದಲ್ಲಿ ಸುಮಾರು ವಾಹನಗಳು ಇದ್ದವು ಎನ್ನುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ–**

ನನ್ನ ಸಮಕ್ಷಮ ಕೆಎ 09 ಎಎ 1670 ಅಶೋಕ್ ಲೈಲ್ಯಾಂಡ್ ದೊಸ್ತ ವಾಹನವನ್ನು ಪೊಲೀಸರು ನನ್ನ ಮತ್ತು ಚಾಸಾ 5 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ವಾಹನವನ್ನು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.